ಉತ್ತಮ ಸಂದೇಶವನ್ನು ಕಟ್ಟಿ ಕೊಡುವ ಗ್ಯಾಂಗ್ ಈ ಚಿತ್ರದ ಪ್ರಮುಖ ಆಕರ್ಷಣೆಯಾಗಲಿದೆ ಎಂದರು.

ಕೇವಲ 6 ತಿಂಗಳಲ್ಲಿ ಸಿದ್ಧವಾದ ಈ ಚಿತ್ರದಲ್ಲಿ ಅರವಿಂದ ಬೋಳಾರ್, ನೀನಾಸಂ ಖ್ಯಾತಿಯ ಮೋಹನ್ ಶೇಣಿ, ವಿಸ್ಮಯ ವಿನಾಯಕ್, ಅಜಯ್ ರಾಜ್ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಂದ್ರಹಾಸ್ ಉಳ್ಳಾಲ ಅವರು ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ನವ್ಯತಾ ರೈ ನಾಯಕಿಯಾಗಿ ಅಭಿನಯ ನೀಡಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತವಿರುವ ಈ ಚಿತ್ರದ ಆಡಿಯೋವನ್ನು ಕನ್ನಡದ ಹಿರಿಯ ನಟ ಅನಂತನಾಗ್ ಬಿಡುಗಡೆ ಮಾಡಿದ್ದರು. ಸತ್ಯ ಘಟನೆಯ ಆಧಾರಿತವಾಗಿ ಈ ಸಿನೆಮಾ ಮೂಡಿಬಂದಿದ್ದು ಕಡಿಮೆ ಬಜೆಟ್‌ನಲ್ಲಿ ಅತ್ಯಂತ ಉತ್ಕೃಷ್ಟ ಸಿನೆಮಾವನ್ನು ಸಿದ್ಧಗೊಳಿಸಲಾಗಿದೆ. ಕೋಸ್ಟಲ್‌ವುಡ್‌ನಲ್ಲಿ ಈ ಸಿನೆಮಾ ಅತ್ಯಂತ ವಿನೂತನ ಶೈಲಿಯಲ್ಲಿ ಮೂಡಿಬರಲಿದೆ ಎಂದವರು ಹೇಳಿದರು.

ಆ. 11ರಿಂದ 19: 'ಉದಯ ಪರ್ಬ'

'ಉದಯ ಕಿಚನೆಕ್ಸ್'ನಲ್ಲಿ ವಿಶೇಷ ಮಾರಾಟ ಮೇಳ

ಉಡುಪಿ, ಆ. 8: ಉದಯ ಸಮೂಹ ಸಂಸ್ಥೆಗಳ 'ಉದಯ ಕಿಚನೆಕ್ಸ್' ಮಳಿಗೆಗಳಲ್ಲಿ ವಾರ್ಷಿಕ ವಿಶೇಷ ಮಾರಾಟ ಮೇಳ 'ಉದಯ ಪರ್ಬ' ಆ. 11ರಿಂದ 19ರ ವರೆಗೆ ಜರಗಲಿದೆ.

SINCE 1979 ಉದಯ GROUP OF INDUSTRIES, MANIPAL

'ಉದಯ ಪರ್ಬ'ದ ಪ್ರಯುಕ್ತ ಭಾರೀ ದರ ಕಡಿತದ ಮಾರಾಟ, ಕಾಂಬೋ ಆಫರ್, ಬಹುಮಾನ ಗಳಿರುತ್ತವೆ. 500 ವ್ಯಾಟ್ ವಿಜಯ ಲಕ್ಸ್ಮೀ ಮಿಕ್ಸಿ ಮತ್ತು 2 ಲೀ. ಟಿಲ್ಟಿಂಗ್ ಗ್ರೈಂಡರ್ 6,490 ರೂ.ಗಳಿಗೆ, ಪ್ರೆಸ್ಟೀಜ್ ಇಂಡಕ್ಷನ್ ಕುಕ್ ಟಾಪ್ ಮತ್ತು ಡಿಎಲ್‌ಎಕ್ಸ್ ಗ್ರಾನೈಟ್ ಬೆವೈಕೆ 4,295 ರೂ.ಗಳಿಗೆ, ಪ್ರೆಸ್ಟೇಜ್ ಜಿಟಿಎಂ 3 ಬರ್ನರ್ ಮತ್ತು ಪ್ರೆಸ್ಟೀಜ್ ಇಎಲ್‌ಜಿ 4 ಜಾರ್ ಮಿಕ್ಸಿ 7,095 ರೂ.ಗಳಿಗೆ, ಉದಯ ಪ್ರೆಶರ್ ಕುಕ್ಕರ್ 5 ಲೀ. ಮತ್ತು ಉದಯ ಮ್ಯಾಜಿಕ್ ಪಾಟ್ 2,490 ರೂ.ಗಳಿಗೆ, ಶಾಂತಾ ಟಿಲ್ಟಿಂಗ್ ಗ್ರೈಂಡರ್ ಪ್ರೈಮಾ 2 ಲೀ. ಮತ್ತು ಸೀಲಿಂಗ್ ಫ್ಯಾನ್ 7,990ಕ್ಕೆ ದೊರೆಯಲಿದೆ. ಇದರ ಜತೆಗೆ ಇತರ ಹಲವು ಗೃಹೋಪಕರಣ ಸಾಮಗ್ರಿಗಳಿಗೆ ಕಾಂಬೋ ಆಫರ್ ಇರುತ್ತದೆ.

ಹಳೆಯ ಅಲ್ಯೂಮಿನಿಯಂ, ಸ್ಟೀಲ್, ತಾಮ್ರ ಮತ್ತು ಹಿತ್ತಾಳೆಯ ಪಾತ್ರೆಗಳಿಗೆ ಹೊಸ ಗ್ರೈಂಡರ್, ಗ್ಯಾಸ್ ಸ್ಟೌ ಕುಕ್ಕರ್, ಮಿಕ್ಸಿ ನಾನ್‌ಸ್ಟಿಕ್ ಪಾತ್ರೆಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಅಲ್ಯೂಮಿನಿಯಂ, ಸ್ಟೈನ್‌ಲೆಸ್ ಸ್ಟೀಲ್, ತಾಮ್ರ, ಹಿತ್ತಾಳೆ, ಕಬ್ಬಿಣ, ಪ್ಲಾಸ್ಟಿಕ್, ಪೂಜಾ ಸಾಮಗ್ರಿಗಳು, ವಿದ್ಯುತ್ ಉಪಕರಣಗಳು, ಬ್ಲಾಕ್/ವೈಟ್ ಮೆಟಲ್, ಐರನ್ ಬಾಕ್ಸ್, ನಿಚ್ಚಣಿಕೆ ಮೊದಲಾದವುಗಳ ಮೇಲೆ ಶೇ. 20ರ ವರೆಗೆ ರಿಯಾಯಿತಿ ಇರುತ್ತದೆ.

ಉಡುಪಿ, ಮಣಿಪಾಲ, ಮಂಗಳೂರು, ಕುಮಟಾ, ಬ್ರಹ್ಮಾವರ, ಕಾಪು, ಕಾರ್ಕಳ, ಪಡುಬಿದ್ರಿ, ಮೂಡಬಿದಿರೆ ಹಾಗೂ ಕುಂದಾಪುರದ ಉದಯ ಕಿಚನೆಕ್ಸ್‌ಗಳಲ್ಲಿ 'ಉದಯ ಪರ್ಬ' ವಿಶೇಷ ಮಾರಾಟ ಮೇಳ ಇರುತ್ತದೆ ಎಂದು ಸಂಸ್ಥೆಯ ಪ್ರಕಟನೆ ತಿಳಿಸಿದೆ.

ರಕ್ಷಣಾ ಸಾಮಗ್ರಿ ಸಿದ್ಧಪಡಿಸುವುದನ್ನು ಕೂಡ ತಿಳಿಸಿಕೊಡಲಾಗುವುದು ಎಂದರು.

ರಿದ್ದು 12,000 ಮಂದಿಯನ್ನು ಪಾಲಿಗೆ ಇಲಾಖೆಗಳಿಗೆಗುತ್ತಿಗೆ ಆಧಾರದ ಮೇಲೆ

ಅವ್ಯವಹಾರದ ತನಿಖೆ ಕುರಿತು ಉಪಸ್ಥಿತರಿದ್ದರು.

ಮಂಗಳೂರು: ಕರ್ಣಾಟಕ ಬ್ಯಾಂಕಿನ 812ನೇ ಶಾಖೆ ಬೆಂಗಳೂರಿನ ಗುಬ್ಬಲಾಳದಲ್ಲಿ ಆರಂಭಗೊಂಡಿದ್ದು, ಸಿನೆಮಾ ಮತ್ತು ರಂಗಭೂಮಿ ಕಲಾವಿದ ಸುಂದರ್ ರಾಜ್ ಬುಧವಾರ ಉದ್ಘಾಟಿಸಿದರು. ಜನರಲ್ ಮ್ಯಾನೇಜರ್ ನಾಗರಾಜ ರಾವ್ ಬಿ., ಡಿಜಿಎಂ ರಾಜಕುಮಾರ್ ಪಿ.ಎಚ್., ಬೆಂಗಳೂರು ಪ್ರಾದೇಶಿಕ ಕಚೇರಿಯ ಎಜಿಎಂಗಳಾದ ರೇಣುಕಾ ಎನ್. ಬಂಗೇರ ಮತ್ತು ವೇಣುಗೋಪಾಲ್ ಭಟ್ ಎಂ., ನೂತನ ಶಾಖಾಧಿಕಾರಿ ಹೃಷಿಕ್ ಹೆಗ್ಡೆ ಮೊದಲಾದವರು ಉಪಸ್ಥಿತರಿದ್ದರು.

ಮಂಗಳೂರು: ಕರ್ಣಾಟಕ ಬ್ಯಾಂಕಿನ 813ನೇ ಶಾಖೆ ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಬುಧವಾರ ಆರಂಭಗೊಂಡಿದ್ದು ಮಳವಳ್ಳಿಯ ಶಾಂತಿ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ। ಪುಟ್ಟಸ್ವಾಮಿ ಅವರು ಉದ್ಘಾಟಿಸಿದರು. ಬ್ಯಾಂಕಿನ ಜನರಲ್ ಮ್ಯಾನೇಜರ್ ಮಂಜುನಾಥ ಭಟ್ ಬಿ.ಕೆ., ಮೈಸೂರು ಪ್ರಾದೇಶಿಕ ಕಚೇರಿಯ ಎಜಿಎಂ ಜಗದೀಶ್ ಕೆ.ಎಸ್., ಚೀಫ್ ಮ್ಯಾನೇಜರ್‌ಗಳಾದ ತಿಮ್ಮಯ್ಯ ಎ.ಎ. ಮತ್ತು ಶ್ರೀಶ, ನೂತನ ಶಾಖೆಯ ಅಧಿಕಾರಿ ಕಿಶೋರ್ ಕುಮಾರ್ ಎನ್. ಮೊದಲಾದವರು ಉಪಸ್ಥಿತರಿದ್ದರು.

ನಿಟ್ಟೆ ತಾಂತ್ರಿಕ ವಿದ್ಯಾಲಯಕ್ಕೆ ಜಪಾನ್ ತಂಡ ಭೇಟಿ

ಕಾರ್ಕಳ, ಆ. 8: ಜಪಾನ್‌ನ ರಿತ್ಸುಮೇಕನ್ ವಿವಿಯ ಕಂಪ್ಯೂಟರ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರೊಫೆಸರ್ ಡಾ। ತಕೇಶಿ ಕುಮಾಕಿ ಅವರ ನೇತೃತ್ವದಲ್ಲಿ 7 ಮಂದಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ತಂಡವು ಆ. 6ರಿಂದ ಆ. 16ರ ವರೆಗೆ 10 ದಿನಗಳ ವಿದ್ಯಾರ್ಥಿ ವಿಚಾರ ವಿನಿಮಯ ಕಾರ್ಯಕ್ರಮದ ಅಂಗವಾಗಿ ನಿಟ್ಟೆ ತಾಂತ್ರಿಕ ಮಹಾವಿದ್ಯಾಲಯಕ್ಕೆ ಆಗಮಿಸಿದೆ.

ಸಂಶೋಧನೆಯ ಬಗೆಗಿನ ವಿಚಾರ ವಿನಿಮಯ ಹಾಗೂ ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್ ಎಲೆಕ್ಟ್ರಿಕಲ್ ಹಾಗೂ ಮೆಕ್ಯಾನಿಕಲ್ ವಿಭಾಗದ ಜ್ಞಾನಾಭಿವೃದ್ಧಿ ಸಹಯೋಗದ ಬಗ್ಗೆ ಅಧ್ಯಯನ ಹಾಗೂ ಚರ್ಚೆ ನಡೆಸಲಿರುವರು ಎಂದು ನಿಟ್ಟೆ ತಾಂತ್ರಿಕ ಕಾಲೇಜಿನ ಪ್ರಾಂಶುಪಾಲ ಡಾ। ನಿರಂಜನ್ ಚಿಪ್ಳೂಣ್ಕರ್ ತಿಳಿಸಿದ್ದಾರೆ.

ತಮಿಳುನಾಡು; ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತ

ಮಂಗಳೂರು, ಆ. 8: ಮಾಜಿ ಮುಖ್ಯಮಂತ್ರಿ ಕರುಣಾನಿಧಿ ನಿಧನದ ಹಿನ್ನೆಲೆಯಲ್ಲಿ ತಮಿಳುನಾಡಿನೆಲ್ಲೆಡೆ ಬುಧವಾರ ಬಂದ್ ವಾತಾವರಣವಿದ್ದ ಕಾರಣ ಮಂಗಳೂರಿನಿಂದ 2 ಸರಕಾರಿ ವೋಲ್ವೋ ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ತಮಿಳುನಾಡಿನಿಂದ ಮಂಗಳೂರಿಗೆ ಬರಬೇಕಿದ್ದ 2 ವೋಲ್ವೋ ಬಸ್ ಸಂಚಾರ ಕೂಡ ಸ್ಥಗಿತಗೊಳಿಸಲಾಗಿತ್ತು. ತಮಿಳುನಾಡಿನಲ್ಲಿ ಬಂದ್ ವಾತಾವರಣ ಇರುವ ಕಾರಣದಿಂದ ಬಸ್ ಸಂಚಾರ ತಡೆಹಿಡಿಯಲಾಗಿತ್ತು.

॥ ಓಂ ಶ್ರೀ ಮಂಜುನಾಥಾಯ ನಮಃ ॥

ಧರ್ಮಸ್ಥಳ: ಲಕ್ಷದೀಪೋತ್ಸವ ಪ್ರಕಟಣೆ

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದಲ್ಲಿ ನಡೆಯುವ

ಶ್ರೀ ಮಂಜುನಾಥ ಸ್ವಾಮಿಯ ಲಕ್ಷದೀಪೋತ್ಸವವು

ಈ ವರ್ಷ ತಾ: 02-12-2018 ರಿಂದ 07-12-2018ರ ತನಕ ನಡೆಯುತ್ತದೆ.

ಸಾವಿರಾರು ಜನರು ನೆರೆಯುವ ಈ ಸಂದರ್ಭದಲ್ಲಿ ಪ್ರತಿ ವರ್ಷದಂತೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ. ಇದರಲ್ಲಿ ಮಳಿಗೆಗಳನ್ನು ತೆರೆಯಲು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು / ಪ್ರದರ್ಶನ ನೀಡಲು ಆಸಕ್ತ ಉಳ್ಳವರು ಕೂಡಲೇ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬೇಕಾಗಿ ವಿನಂತಿ.

ಕಾರ್ಯದರ್ಶಿ
ವಸ್ತು ಪ್ರದರ್ಶನ ಸಮಿತಿ, ರತ್ನಮಾನಸ, ಉಜಿರೆ
ಮೊ.: 9449488976

ಶ್ರೀ ಕೃಷ್ಣ ಮಠ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ-
ಶ್ರೀಹೃಷೀಕೇಶತೀರ್ಥಪೀಠಮ್ ಪರ್ಯಾಯ ಶ್ರೀ ಪಲಿಮಾರು ಮಠ, ಉಡುಪಿ.

ದಿನಾಂಕ: 9-8-2018. ಇಂದಿನ ಕಾರ್ಯಕ್ರಮಗಳು.
ಬೆಳಿಗ್ಗೆ ಗಂಟೆ 5.00ರಿಂದ: ಲಕ್ಷತುಳಸಿ ಅರ್ಚನೆ, ಮಹಾಪೂಜೆ. ಮಧ್ಯಾಹ್ನ ಗಂಟೆ 4.00ಕ್ಕೆ: ಚಂದ್ರಕಾಲೆ ಪುರಾಣ.
ವಿಷಯ: ಮಹಾಭಾರತದ ಅನುಶಾಸನ ಪರ್ವದಲ್ಲಿ ವಿಷ್ಣುಸಹಸ್ರನಾಮ.
ಪ್ರವಚನಕಾರರು: ವಿದ್ವಾನ್ ಮೋಹನಾಚಾರ್ಯ. ಸಂಜೆ ಗಂಟೆ 5.00ರಿಂದ ಮಧ್ವಮಂಟಪದಲ್ಲಿ:
ಶ್ರೀ ಹಂಡೆದಾಸ ಪ್ರತಿಷ್ಠಾನ (ರಿ.) ಇವರ ವತಿಯಿಂದ ಹರಿಕಥಾ ದಶಃ ಕಾರ್ಯಕ್ರಮ.
ಹರಿಕಥೆ: ಶ್ರೀಮತಿ ಪರಿಣಯ. ಹರಿದಾಸರು: ಕು. ವಸುಪ್ರಧ ಭಟ್, ಉಡುಪಿ.
ಸಂಜೆ ಗಂಟೆ 5.30ಕ್ಕೆ ರಾಜಾಂಗಣದಲ್ಲಿ ಜ್ಞಾನಸತ್ರ. ವಿಷಯ: ಮಹಾಭಾರತ.
ಅನುಗ್ರಹ ಸಂದೇಶ: ಶ್ರೀಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಪರ್ಯಾಯ ಶ್ರೀ ಪಲಿಮಾರು ಮಠ,
ಶ್ರೀ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಶ್ರೀ ಅದಮಾರು ಮಠ (ಕಿರಿಯ ಪಟ್ಟ). ಪ್ರವಚನಕಾರರು: ವಿದ್ವಾನ್ ರವೀಂದ್ರ ಭಟ್, ಹೆಗ್ಡೆ. ರಾತ್ರಿ ಗಂಟೆ 7.30ಕ್ಕೆ ಚಾಮರ ಸೇವೆ, ರಾತ್ರಿ ಪೂಜೆ.
ವಿ.ಸೂ: ತಾ. 11-8-2018ರಂದು ಅಮಾವಾಸ್ಯೆಯ ಪ್ರಯುಕ್ತ ಬೆಳಿಗ್ಗೆ ಸಾಮೂಹಿಕ ಕನಿಷ್ಠಾಂತಿ ಹೋಮ ಹಾಗೂ ಸಂಜೆ ಸಾಮೂಹಿಕ ಆಶ್ಲೇಷಾ ಬಲಿ ಸೇವೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9686603855 (ಸೇವಾ ಕಚೇರಿ).
ಪರ್ಯಾಯ ಶ್ರೀ ಪಲಿಮಾರು ಮಠದ ಆಶ್ರಯದಲ್ಲಿ ಹಾಗೂ ಮಂತ್ರಾಲಯ ದಾಸಸಾಹಿತ್ಯ ಪ್ರಾಜೆಕ್ಟ್ ಮತ್ತು ಟಿ.ಟಿ.ಡಿ, ದಾಸಸಾಹಿತ್ಯ ಪ್ರಾಜೆಕ್ಟ್ ತಿರುಪತಿ ಇವರ ಸಹಭಾಗಿತ್ವದಲ್ಲಿ ನಿರಂತರ ಹರಿನಾಮಸಂಕೀರ್ತನೆ.

ಕೊಳ್ನಾಡು ಗ್ರಾ.ಪಂ.ಅನ್ನು ನಮ್ಮ ಗ್ರಾಮ ನಮ್ಮ ಯೋಜನೆಯಡಿ ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು 10 ಲಕ್ಷ ರೂ.ಗಳ ಪ್ರೋತ್ಸಾಹಧನವನ್ನು ಹೊಂದಿದೆ.

2016-17ನೇ ಸಾಲಿನ ಆವಶ್ಯಕತೆ ಮತ್ತು ಆದ್ಯತೆಯ ಮೇರೆಗೆ ಎಲ್ಲ ಸಮುದಾಯದ ಅಭಿವೃದ್ಧಿ ಯೋಜನೆಗಳನ್ನು ಜನರ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಿದ್ದನ್ನು ಗುರುತಿಸಿ ಕರ್ನಾಟಕ ಸರಕಾರವು ನಮ್ಮ ಗ್ರಾಮ ನಮ್ಮ ಯೋಜನೆ ಯಡಿ ಈ

Get hands-on with SketchUp
The trending 3D Modelling Software
CADD CENTRE
Driving Digital Designs!
M.G.Road - Mangalore
82770 49882
Karkala 94815 24692

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ
ಕುಪ್ಪಾರು - 574 118, ಉಡುಪಿ Ph: (08

'ಸ್ವರ್ಣಾಮೃತ ಪ್ರಾಶನ' ನೀಡುವ ಕೇಂದ್ರಗಳು
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯ
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್
- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಕಚೇರಿ
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಸ್ಪತ್ರೆ
- ಜೀವನ್ ಕ್ಲಿನಿಕ್, ಮಾರ್ಕೆಟ್ ರಸ್ತೆ, ಕಾಕ
- ಲಕ್ಷ್ಮೀ ನರಸಿಂಹ ಕ್ಲಿನಿಕ್, ಸಿಬಿನ ಕೆರೆ,

ಅಪರಾಹ್ನ 5.00 ರಿಂದ 7.00
ವಿ.ಸೂ. ಹೊರರೋಗಿ ವಿಭಾಗದಲ್ಲಿ ಸಂ